# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 995
ಸದಸ್ಯರ ಹೆಸರು : ಶ್ರೀ ಹೆಚ್.ಎಂ. ರಮೇಶ ಗೌಡ
ಉತ್ತರಿಸಬೇಕಾದ ದಿನಾಂಕ : 12.03.2020
ಉತ್ತರಿಸುವ ಸಚಿವರು : ಗೃಹ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಬೆಂಗಳೂರು ನಗರದ ಎಲ್ಲೆಂದರಲ್ಲಿ ಟ್ರಾಫಿಕ್ ಪೋಲೀಸರು ಓಡಿ ಬಂದು ರಸ್ತೆ ಮಧ್ಯೆ ವಾಹನಗಳಿಗೆ ಅಡ್ಡ ಹಾಕುವುದರಿಂದ ವಾಹನ ಸವಾರರಲ್ಲಿ ಭಯ ಹುಟ್ಟಿ ಅನಾಹುತಗಳು ಸಂಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೌದು |
| (ಆ) | ಬಂದಿದ್ದಲ್ಲಿ, ವಾಹನ ಸವಾರರಿಗೆ ತೊಂದರೆಯಾಗದಂತೆ ಸರ್ಕಾರವು ಕೈಗೊಂಡ ಸೂಕ್ತ ಕ್ರಮಗಳೇನು; | ವಾಹನ ಸವಾರರಿಗೆ ತೊಂದರೆಯಾಗದಂತೆ ನಿಯಮ ಜಾರಿ ವೇಳೆ ಸಂಚಾರ ನಿಯಮ ಉಲ್ಲಂಘಿಸುವ ವಾಹನ ಚಾಲಕ/ಸವಾರರ ವಿರುದ್ಧ ಪ್ರಕರಣಗಳು ದಾಖಲಿಸುವಲ್ಲಿ ಸಂಚಾರ ಪೋಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಯವರು ಈ ಕೆಳಕಂಡ ಅಂಶಗಳನ್ನು ಪಾಲಿಸಲು ಸೂಕ್ತ ನಿರ್ದೇಶನಗಳನ್ನು ನೀಡಲಾಗಿದೆ.<br>**1. <u>ವಾಹನಗಳನ್ನು ತಡೆಯಲು ಅನುಸರಿಸಬೇಕಾದ ಕ್ರಮಗಳು</u> :**<br>➢ ಸಂಚಾರ ಪೋಲೀಸರು ವೃತ್ತಿಪರ ಕರ್ತವ್ಯ ಕೌಶಲ್ಯಗಳನ್ನು ಅಳವಡಿಸಿಕೊಂಡು ಕರ್ತವ್ಯ ನಿರ್ವಹಿಸಬೇಕೇ ಹೊರತು ಒಮ್ಮಿಂದೊಮ್ಮೆಲೆ ರಸ್ತೆಯಲ್ಲಿ ವೇಗವಾಗಿ ಬರುತ್ತಿರುವ ವಾಹನಗಳನ್ನು ಏಕಾಏಕಿ ತಡೆದು ನಿಲ್ಲಿಸುವ ಸಾಹಸ ಕಾರ್ಯಕ್ಕೆ ಧುಮುಕಬಾರದು.<br>➢ ಅವಶ್ಯವಿದ್ದಲ್ಲಿ ಉಲ್ಲಂಘನೆ ಮಾಡುವ ವಾಹನ ನೋಂದಣಿ ಸಂಖ್ಯೆಯನ್ನು ಗುರುತು ಹಾಕಿಕೊಂಡು ನಂತರ ಅದರ ಮಾಲೀಕರನ್ನು ಠಾಣೆಗೆ ಕರೆಯಿಸಿ ಕಾನೂನು ರೀತ್ಯಾ ಕ್ರಮ ಕೈಗೊಳ್ಳುವುದು.<br>➢ ವಿಶೇಷ ಕಾರ್ಯಾಚರಣೆ ವೇಳೆ ವಾಹನಗಳ ವೇಗವನ್ನು ನಿಯಂತ್ರಿಸಲು "W" ಮಾದರಿಯಲ್ಲಿ ಬ್ಯಾರಿಕೇಡ್‌ಗಳನ್ನು ಅಳವಡಿಸಿಕೊಂಡು ಮುಂದಿನ ದಿನಗಳಲ್ಲಿ ಸಾರ್ವಜನಿಕರು ಮತ್ತು ಸಂಚಾರ ಪೋಲೀಸ್ ವಿಭಾಗದ ಎಲ್ಲಾ ಅಧಿಕಾರಿ ಸಿಬ್ಬಂದಿಗಳು ತಮ್ಮ ಸುರಕ್ಷತೆಯನ್ನು ಆದ್ಯತೆಯ ಮೇರೆಗೆ ಪರಿಗಣಿಸಿ ಯಾವುದೇ ಅವಘಡಗಳು ಪುನರಾವರ್ತನೆಯಾಗದಂತೆ ಎಚ್ಚರವಹಿಸಬೇಕು.<br>➢ ಸಂಜೆ ವೇಳೆ ರಿಫ್ಲೆಕ್ಟೀವ್ ಜಾಕೆಟ್‌ಗಳನ್ನು ಧರಿಸುವುದರಿಂದ ಅಪಘಾತಗಳನ್ನು ತಪ್ಪಿಸಬಹುದಾಗಿದೆ. ರಿಫ್ಲೆಕ್ಟೀವ್ ಜಾಕೆಟ್‌ಗಳನ್ನು ಎಲ್ಲಾ ಜಂಕ್ಷನ್ ಜಾಕಿಗಳು ಧರಿಸುವುದು ಕಡ್ಡಾಯ.<br>➢ ಠಾಣೆಗಳಿಗೆ ವಿತರಿಸಲಾಗಿರುವ ಟ್ರಾಫಿಕ್ ಬ್ಯಾಟನ್‌ಗಳನ್ನು ರಾತ್ರಿ ಸಮಯದಲ್ಲಿ ಉಪಯೋಗಿಸುವುದರಿಂದ ಪೋಲೀಸ್ ನೀಡುವ ಸೂಚನೆಗಳು ವಾಹನ ಚಾಲಕ/ಸವಾರರಿಗೆ ಕಾಣಿಸುವಲ್ಲಿ ಮಹತ್ತರ ಪಾತ್ರ ವಹಿಸುತ್ತದೆ.<br>➢ ಯಾವುದೇ ವಾಹನ ಚಾಲಕರು ನಿಲ್ಲಿಸಲು ಸೂಚಿಸಿದರೂ, ಧಿಕ್ಕರಿಸಿ ತಮ್ಮ |

| | | |
|---|---|---|
| | | ವಾಹನದ ವೇಗವನ್ನು ಹೆಚ್ಚಿಸಿದಲ್ಲಿ ಆ ವಾಹನದ ನೋಂದಣಿ ಸಂಖ್ಯೆ ಮತ್ತು ಮಾದರಿಯನ್ನು ಮುಂದಿನ ಜಂಕ್ಷನ್ ಜಾಕಿಗಳಿಗೆ ನಿಸ್ತಂತು ಮುಖಾಂತರ ರವಾನಿಸಿ ನಿಲ್ಲಿಸಿ ಮುಂದಿನ ಕ್ರಮ ಕೈಗೊಳ್ಳಬಹುದಾಗಿದೆ.<br>➢ ನಿಲ್ಲಿಸಲು ಸೂಚಿಸಿದ ವಾಹನಗಳು ನಿಲ್ಲದೇ ಹೋದಾಗ ಅಂತಹ ವಾಹನಗಳನ್ನು ಯಾವುದೇ ಕಾರಣಕ್ಕೂ ಚೇಸ್ ಮಾಡಿಕೊಂಡು ಹೋಗದಿರುವುದು ಉತ್ತಮ.<br>➢ ನಿಯಮಗಳನ್ನು ಜಾರಿ ಮಾಡುವಾಗ ವಾಹನಗಳನ್ನು ತಡೆದು ನಿಲ್ಲಿಸಲು ವಾಹನ ಚಾಲಕರಿಗೆ ಕಾಣುವಂತೆ ಇರುವ ಸ್ಥಳಗಳಲ್ಲಿ ನಿಂತು ವಾಹನಗಳನ್ನು ತಡೆದು ನಿಲ್ಲಿಸುವುದು.<br>➢ ಅಪಾಯವನ್ನು ನಿಗ್ರಹಿಸುವ ಮತ್ತು ತಡೆಗಟ್ಟುವ ನಿಟ್ಟಿನಲ್ಲಿ ಪ್ರತಿಯೊಬ್ಬ ಪೊಲೀಸ್ ಸಿಬ್ಬಂದಿಯವರು ತಮ್ಮ ಕನಿಷ್ಟ ಸಾಮಾನ್ಯ ಪರಿಜ್ಞಾನವನ್ನು ಉಪಯೋಗಿಸಿಕೊಳ್ಳುವುದರಿಂದ ವಾಹನ ಚಾಲಕ/ಸವಾರರುಗಳಾದಿಯಾಗಿ ಸಂಚಾರ ಪೊಲೀಸ್ ಸಿಬ್ಬಂದಿಗಳಿಗೆ ಅಗುತ್ತಿರುವ ಅಪಘಾತಗಳನ್ನು ತಡೆಗಟ್ಟಬಹುದಾಗಿದೆ. |
| (ಇ) | ವಾಹನ ಸವಾರರಲ್ಲಿ ಟ್ರಾಫಿಕ್ ಪೊಲೀಸರ ವಿಷಯವಾಗಿ ಭಯದ ವಾತಾವರಣವನ್ನು ತೆಗೆದು ಹಾಕಲು ಸರ್ಕಾರವು ತೆಗೆದುಕೊಂಡ ಸೂಕ್ತ ನಿರ್ಣಯಗಳು ಯಾವುವು; | ಸಾರ್ವಜನಿಕರ ಜೊತೆಗೆ ಉತ್ತಮ ಬಾಂಧವ್ಯ ಹೊಂದುವ ಮೂಲಕ ಸಂಚಾರ ಪೊಲೀಸರ ಬಗ್ಗೆ ಇರುವ ಭಯದ ವಾತಾವರಣವನ್ನು ತೆಗೆದುಹಾಕಲು ಈ ಕೆಳಕಂಡ ಕ್ರಮವನ್ನು ತೆಗೆದುಕೊಳ್ಳಲಾಗಿದೆ.<br>➢ ನಿಯಮ ಪಾಲಿಸುವವರ ಬಗ್ಗೆ ಮತ್ತು ಸಂಚಾರ ನಿಯಮ ಅರಿವು ಮೂಡಿಸುವವರ ಬಗ್ಗೆ ಸಂಚಾರ ಪೊಲೀಸರು ನೇರವಾಗಿ ಶ್ಲಾಘಿಸುವ ಕ್ರಮ ಕೈಗೊಳ್ಳಲಾಗಿದೆ.<br>➢ ನಿಯಮ ಪಾಲಿಸುವವರನ್ನು ಅತ್ಯಂತ ಗೌರವಯುತವಾಗಿ ನೋಡಲು ಮತ್ತು ನಿಯಮ ಜಾರಿ ವೇಳೆ ಸಾರ್ವಜನಿಕರೊಡನೆ ಸೌಜನ್ಯಯುತವಾಗಿ ವರ್ತಿಸಲು ಅಧಿಕಾರಿ ಸಿಬ್ಬಂದಿಯವರಿಗೆ ಸೂಕ್ತ ನಿರ್ದೇಶನ ನೀಡಲಾಗಿದೆ.<br>➢ ಸಾರ್ವಜನಿಕರು ಮತ್ತು ಮಕ್ಕಳಿಗೆ ಸಂಚಾರ ಪೊಲೀಸರೊಂದಿಗೆ ಉತ್ತಮ ಬಾಂಧವ್ಯ ಏರ್ಪಡಲು ಶಾಲೆಗಳಿಗೆ ತೆರಳಿ ವಿದ್ಯಾರ್ಥಿಗಳಿಗೆ ಸಂಚಾರ ನಿಯಮದ ಬಗ್ಗೆ ಅರಿವು ಮೂಡಿಸಲಾಗುತ್ತಿದೆ.<br>➢ ಸಂಚಾರ ಪೊಲೀಸರು ಜನಸ್ನೇಹಿಯಾಗುವ ನಿಟ್ಟಿನಲ್ಲಿ ಸಂಚಾರ ಪೊಲೀಸರೊಂದಿಗೆ ಸಂಚಾರ ನಿರ್ವಹಣೆ ಮತ್ತು ನಿಯಂತ್ರಣದಲ್ಲಿ ಸ್ವ-ಇಚ್ಛೆಯಿಂದ ಭಾಗಿಯಾಗಲು ಸಾರ್ವಜನಿಕರಿಗೆ ಅವಕಾಶ ಕಲ್ಪಿಸಿ ಟ್ರಾಫಿಕ್ ವಾರ್ಡನ್ ವ್ಯವಸ್ಥೆಯನ್ನು ಆಯೋಜಿಸಲಾಗಿದೆ.<br>➢ ಸಾರ್ವಜನಿಕರು ಮತ್ತು ಶಾಲಾ ಮಕ್ಕಳನ್ನು ಪೊಲೀಸ್ ಠಾಣೆಗೆ ಆಹ್ವಾನಿಸಿ ಸಂಚಾರ ಪೊಲೀಸರ ಬಗ್ಗೆ ಇರುವ ವ್ಯತಿರಿಕ್ತ ಅಭಿಪ್ರಾಯವನ್ನು ಬದಲಾಯಿಸಿ ಉತ್ತಮ ಬಾಂಧವ್ಯ ಬೆಳೆಸಲು ರಸ್ತೆ ಸುರಕ್ಷತೆ ಬಗ್ಗೆ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಸಂಚಾರ ವಿಭಾಗ ಅಧಿಕಾರಿಗಳಿಗೆ ಸೂಚಿಸಲಾಗಿದೆ.<br>➢ ಸಂಚಾರ ವ್ಯವಸ್ಥೆಯನ್ನು ಸುಗಮ ಪಡಿಸುವಲ್ಲಿ ಸಾರ್ವಜನಿಕರನ್ನು ಠಾಣೆಗಳಿಗೆ ಆಹ್ವಾನಿಸಿ ಅವರುಗಳಿಂದ ಸಲಹೆಗಳನ್ನು ಪಡೆದು ಅನುಷ್ಠಾನಗೊಳಿಸಲಾಗುತ್ತಿದೆ.<br>➢ ಸಾರ್ವಜನಿಕರು ಮತ್ತು ಸಂಚಾರ ಪೊಲೀಸರ ಮಧ್ಯೆ ಉತ್ತಮ ಬಾಂಧವ್ಯ ಏರ್ಪಡಲು ಟ್ರಾಫಿಕ್ ಬೀಟ್ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ.<br>➢ ಸಂಚಾರ ನಿಯಮ ಜಾರಿ ಮತ್ತು ಸುಗಮ ಸಂಚಾರ ವ್ಯವಸ್ಥೆ ಏರ್ಪಡಲು ಸಾರ್ವಜನಿಕರ ಸಹಾಯ ಪಡೆದು ಸಾರ್ವಜನಿಕರು ಮತ್ತು ಸಂಚಾರ |

| | | |
|---|---|---|
| | | ಪೊಲೀಸರ ಮಧ್ಯೆ ಉತ್ತಮ ಬಾಂಧವ್ಯ ಏರ್ಪಡಲು ಕ್ರಮ ತೆಗೆದುಕೊಂಡಿದ್ದು, ಇದರಿಂದ ಸಾರ್ವಜನಿಕರಲ್ಲಿ ಪೊಲೀಸರ ಬಗ್ಗೆ ಇರುವ ಭಯದ ವಾತಾವರಣವನ್ನು ತೊಡೆದುಹಾಕಲಾಗಿದೆ. |
| (ಈ) | ಬೆಂಗಳೂರು ನಗರದ ಹಲವೆಡೆ ನೋ ಪಾರ್ಕಿಂಗ್ ಬೋರ್ಡ್ ಹಾಕದೇ ಸಾರ್ವಜನಿಕರಿಗೆ ಸರಿಯಾದ ಮಾಹಿತಿ ನೀಡದೆ, ಇದ್ದಕ್ಕಿದ್ದ ಹಾಗೆ ವಾಹನಗಳನ್ನು ಟೋಯಿಂಗ್ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಕೆಲವೊಮ್ಮೆ ಪಾರ್ಕಿಂಗ್ ಜಾಗದಲ್ಲಿ ವಾಹನಗಳನ್ನು ನಿಲ್ಲಿಸಿದ್ದರೂ ಸಹ ವಾಹನಗಳ ಟೋಯಿಂಗ್ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ➢ ಬೆಂಗಳೂರು ನಗರ ಸಂಚಾರ ವಿಭಾಗದ ವ್ಯಾಪ್ತಿಯ ರಸ್ತೆಗಳಲ್ಲಿ ಅಸ್ತವ್ಯಸ್ತ ಹಾಗೂ ಅಸಮರ್ಪಕವಾಗಿ, ನಿಷೇಧಿತ/ನಿರ್ಬಂಧಿತ ಸ್ಥಳಗಳಲ್ಲಿ ನಿಲ್ಲಿಸುವ ಹಾಗೂ ಸುಗಮ ಸಂಚಾರ ವ್ಯವಸ್ಥೆಗೆ ಅಡಚಣೆಯನ್ನುಂಟು ಮಾಡುವಂತಹ ವಾಹನಗಳನ್ನು ಮಾತ್ರ ಟೋ ಮಾಡಲಾಗುತ್ತಿದ್ದು, ಅಂತಹ ವಾಹನಗಳ ವಾಹನ ಚಾಲಕ/ಮಾಲೀಕರಿಂದ ಟೋಯಿಂಗ್ ಶುಲ್ಕ ಸೇರಿ ದಂಡ ವಸೂಲು ಮಾಡಲಾಗುತ್ತಿದೆ.<br>➢ ಪಾರ್ಕಿಂಗ್ ಜಾಗದಲ್ಲಿ ನಿಲ್ಲಿಸಿದ್ದ ವಾಹನಗಳನ್ನು ಟೋ ಮಾಡಲಾಗುವುದಿಲ್ಲ. ಈ ಜಾಗಗಳಲ್ಲಿ ನಿಲ್ಲಿಸಿದ್ದ ವಾಹನಗಳನ್ನು ಟೋ ಮಾಡಿರುವ ಬಗ್ಗೆ ಯಾವುದೇ ನಿದರ್ಶನಗಳು ಗಮನಕ್ಕೆ ಬಂದಿರುವುದಿಲ್ಲ. |
| (ಉ) | ಟೋಯಿಂಗ್ ವಾಹನದ, ಟ್ರಾಫಿಕ್ ಪೊಲೀಸ್ ಅಧಿಕಾರಿಗಳು ಇಲ್ಲದೆ ಇರುವಾಗಲೂ ಸಹ ಎಲ್ಲೆಂದರಲ್ಲಿ ಟೋಯಿಂಗ್ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಈ ಸಂಬಂಧ ಸರ್ಕಾರ ಕೈಗೊಂಡ ಕ್ರಮಗಳೇನು; | ಟೋಯಿಂಗ್ ವಾಹನ ಕಾರ್ಯಾಚರಣೆ ವೇಳೆಯಲ್ಲಿ ಈ ಕೆಳಕಂಡ ಪದ್ಧತಿಯನ್ನು ಅನುಸರಿಸಲಾಗುತ್ತಿದೆ.<br>➢ ಪಿ.ಎಸ್.ಐ., ಎ.ಎಸ್.ಐ., ದರ್ಜೆಯ ಅಧಿಕಾರಿಯನ್ನು ಟೋಯಿಂಗ್ ವಾಹನದ ಉಸ್ತುವಾರಿಗೆ ನಿಯೋಜಿಸಲಾಗಿದೆ.<br>➢ ನಿಷೇಧಿತ/ನಿರ್ಬಂಧಿತ ಸ್ಥಳಗಳಲ್ಲಿ ವಾಹನಗಳನ್ನು ಟೋ ಮಾಡುವ ಸಂದರ್ಭಗಳಲ್ಲಿ ವಾಹನ ಚಾಲಕ/ಮಾಲೀಕರು ಬಂದಲ್ಲಿ ಅವರಿಂದ ನೋ–ಪಾರ್ಕಿಂಗ್‌ಗೆ ಸಂಬಂಧಿಸಿದ ದಂಡವನ್ನು ಮಾತ್ರ ಪಡೆಯಲಾಗುತ್ತಿದೆ. |
| (ಊ) | ಹಾಗಿದ್ದಲ್ಲಿ, ಅಧಿಕಾರಿಗಳಿಗೆ ಈ ಸಂಬಂಧ ಸೂಕ್ತ ರೀತಿಯಲ್ಲಿ ಸಲಹೆ ಸೂಚನೆಗಳನ್ನು ನೀಡುವಲ್ಲಿ ಸರ್ಕಾರದಿಂದ ಉನ್ನತ ಮಟ್ಟದ ಸಭೆಗಳು ನಡೆದಿವೆಯೇ ? | ಸಂಚಾರ ವಿಭಾಗದ ಅಧಿಕಾರಿಗಳಿಗೆ ಹಮ್ಮಿಕೊಳ್ಳಲಾಗುವ ಪ್ರತಿ ಸಭೆಯಲ್ಲೂ ಚರ್ಚಿಸುವ ಅಂಶಗಳಲ್ಲಿ ಟೋಯಿಂಗ್ ವಾಹನಗಳ ಕಾರ್ಯಾಚರಣೆ ಸಹ ಚರ್ಚಿತ ವಿಷಯಗಳಲ್ಲಿನ ಪ್ರಮುಖ ಅಂಶವಾಗಿ ಪರಿಗಣಿಸಲಾಗಿದೆ. ಈ ನಿಟ್ಟಿನಲ್ಲಿ ಅನುಸರಿಸಬೇಕಾದ ಗುಣಮಟ್ಟದ ನಿರ್ವಹಣಾ ವಿಧಾನಗಳ ಬಗ್ಗೆ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನಗಳನ್ನು ನೀಡಲಾಗುತ್ತಿದೆ. |

**ಹೆಚ್‌ಡಿ 38 ಎಸ್‌ಎಸ್‌ಟಿ 2020**

(ಬಸವರಾಜ ಬೊಮ್ಮಾಯಿ)
ಗೃಹ ಸಚಿವರು